ವೆಬ್‌ಸೈಟ್ : www.uasbangalore.edu.in
ಇ-ಮೈಲ್ : vc@uasbangalore.edu.in
vcuasb1964@gmail.com

ಕಛೇರಿ : 080-23332442
: 080-23330153 (Extn. 265)
ಮೊಬೈಲ್ : 9449866900
ಫ್ಯಾಕ್ಸ್ : 91-080-23330277

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಡಾ. ಎಸ್.ವಿ. ಸುರೇಶ
ಕುಲಪತಿಗಳು

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಬೆಂಗಳೂರು - 560 065

ದಿನಾಂಕ: 14.06.2026

## ಅಭಿನಂದನಾ ಪತ್ರ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಪ್ರಸಕ್ತ ಸಾಲಿನ **ಇಂಡಿಯನ್ ಇನ್‌ಸ್ಟಿಟ್ಯೂಷನಲ್ ಶ್ರೇಯಾಂಕ ಫ್ರೇಮ್‌ವರ್ಕ್ (Indian Institutional Ranking Framework)** (IIRF) 2026ರ ಶ್ರೇಯಾಂಕ ಪಟ್ಟಿಯಲ್ಲಿ ದೇಶದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಸಾಲಿನಲ್ಲಿ **7ನೇ ಸ್ಥಾನವನ್ನು ಪಡೆದು** ತನ್ನ ಶ್ರೇಷ್ಠತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಇದರೊಂದಿಗೆ ಕರ್ನಾಟಕ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿಯೇ ಕೃ.ವಿ.ವಿ.ಬೆಂಗಳೂರು ಅಗ್ರಸ್ಥಾನವನ್ನು ಪಡೆದಿದೆ. IIRF ದೇಶಾದ್ಯಂತ 5000 ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮೌಲ್ಯಮಾಪನ ಮಾಡುವ, ರಾಷ್ಟ್ರೀಯ ಮಟ್ಟದ ಶ್ರೇಯಾಂಕ ನೀಡುವ ಸಂಸ್ಥೆಯಾಗಿದೆ.

ತಮ್ಮೆಲ್ಲರ ಉತ್ತಮ ಸಹಕಾರದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು **IIRF ರ್‍ಯಾಂಕಿಂಗ್‌ನಲ್ಲಿ 7ನೇ ಸ್ಥಾನವನ್ನು** ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಈ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಹರ್ಷವೆನಿಸುತ್ತದೆ.

ವಿಶ್ವವಿದ್ಯಾನಿಲಯದ ಈ ಕಾರ್ಯಸಾಧನೆಗೆ ಸಹಕಾರ ನೀಡಿದ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳು, ಬೋಧಕರು, ಬೋಧಕೇತರರು, ಗುತ್ತಿಗೆ ನೌಕರರು, ವಿದ್ಯಾರ್ಥಿಗಳು ಹಾಗೂ ಕೃಷಿ ಕಾರ್ಮಿಕರು ಪ್ರತಿಯೊಬ್ಬರನ್ನೂ ಸಹ ಈ ಸಂದರ್ಭದಲ್ಲಿ **ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.**

ನಿಮ್ಮೆಲ್ಲರ ನಿರಂತರ ಬದ್ಧತೆಯೊಂದಿಗೆ ಮುಂದಿನ ದಿನಗಳಲ್ಲಿ IIRF ರ್‍ಯಾಂಕಿಂಗ್‌ನಲ್ಲಿ ವಿಶ್ವವಿದ್ಯಾನಿಲಯದ ಸ್ಥಾನವನ್ನು ಉತ್ತಮ ಪಡಿಸುವಲ್ಲಿ ನಾವೆಲ್ಲರೂ ಇನ್ನೂ ಹೆಚ್ಚಿನ ರೀತಿಯಲ್ಲಿ ಕಾರ್ಯೋನ್ಮುಕರಾಗೋಣವೆಂದು ತಿಳಿಸುತ್ತಾ ಮತ್ತೊಮ್ಮೆ ನಿಮ್ಮೆಲ್ಲರ ಪರಿಶ್ರಮಕ್ಕೆ ಹಾಗೂ ಉತ್ಸಾಹಕ್ಕೆ ಧನ್ಯವಾದಗಳು

(ಎಸ್. ವಿ. ಸುರೇಶ)

ಇವರಿಗೆ,

1. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳು
2. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗೀಯ ವಿಶ್ವವಿದ್ಯಾನಿಲಯದ ಮುಖ್ಯಸ್ಥರುಗಳು
3. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದ ಮುಖ್ಯಸ್ಥರುಗಳು
4. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಸಂಶೋಧನಾ ಕೇಂದ್ರಗಳ ಮುಖ್ಯಸ್ಥರುಗಳು
5. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಕೃಷಿ ವಿಜ್ಞಾನ ಕೇಂದ್ರಗಳ ಮುಖ್ಯಸ್ಥರುಗಳು
6. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ವಿಸ್ತರಣಾ ಘಟಕಗಳ ಮುಖ್ಯಸ್ಥರುಗಳು
7. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಯೋಜನೆ/ ಪ್ರಯೋಜನೆಗಳ ಮುಖ್ಯಸ್ಥರುಗಳು
8. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು
9. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು
10. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು
11. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಕಾರ್ಮಿಗಳು

ತಮ್ಮ ವಿಭಾಗದ/ ನಿರ್ದೇಶನಾಲಯದ ಎಲ್ಲಾ ಬೋಧಕ/ ಬೋಧಕೇತರ ಗುತ್ತಿಗೆ ನೌಕರರು/ ಕೃಷಿ ಕಾರ್ಮಿಕರು/ ವಿದ್ಯಾರ್ಥಿಗಳಿಗೆ ತಲುಪಿಸಲು